ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Monday, the 28th July 1975/Shravana 6, 1897 S.E.

The House met in the Assembly Chamber, Vidhana Soudha at One of the Clock.

MADAM SPEAKER (SMT. K. S. NAGARATHNAMMA) in the Chair.

OBITUARY REFERENCE

Re : Demise of Smt. Yellawwa Sambrani.

MADAM SPEAKER.—I regret to make a reference to the sad demise of Smt. Yellawwa Sambrani, a former Member of the Legislative Assembly.

Smt. Yellawwa Sambrani was a member of this House between 1962–1967. She was a social worker and strove hard for the welfare of the Harijan Community.

I request the members to stand in silence for two minutes as a mark of respect to the deceased.

The House stood in silence for two minutes.

Objection re: Suspension of Rules relating to business initiated by a Private Member.

ಶ್ರೀ ಎಸ್. ಎಂ. ಕೃಷ್ಣ (ಕೈಗಾರಿಕಾ ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ನಾನು ಈ ನಿರ್ಣಯವನ್ನು ಸದನದ ಅಂಗೀಕಾರಕ್ಕಾಗಿ ಮಂಡಿಸುತ್ತೇನೆ. ನನ್ನ ನಿರ್ಣಯ ಈ ರೀತಿ ಇದೆ.—

ಶ್ರೀ ಟಿ ಆರ್. ಶಾಮಣ್ಣ (ಕೋಟೆ).—ನನ್ನದು ಒಂದು ಪಾಯಿಂಟ್ ಆಫ್ ಆರ್ಡರ್ ಇಷ್ಟೆ. ಸಾಧಾರಣವಾಗಿ, ನಮ್ಮ ನಿಯಮಾವಳಿಗಳ ಪ್ರಕಾರ ಪ್ರಶ್ನೆಗಳನ್ನು ಕೇಳತಕ್ಕಾಥಾದ್ದು ಮೊದಲನೆಯ ಭಾಗವಾಗಿತ್ತು. ಕೆಲವು ಸಂದರ್ಭಗಳಲ್ಲಿ ಮಾತ್ರ ಅದಕ್ಕೆ ಒಪ್ಪಿಗೆ ಪಡೆದು ಮಾಡ್ತಿದ್ದೆವು. ಆದರೆ ಈ ಅಧಿವೇಶನದಲ್ಲಿ ಪ್ರಶ್ನೋತ್ತರ ವೇಳೆಯನ್ನು ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿಸದೇ ಇರುವುದು ಸರಿಯಾದುದಲ್ಲ ಎಂದು ನಾನು ಈ ಸಂದರ್ಭದಲ್ಲಿ ತಮಗೆ ಹೇಳಬಯಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ, ಲವು ಸಂದರ್ಭಗಳಲ್ಲಿ ಪ್ರಶ್ನೋತ್ತರ ವೇಳೆಯನ್ನು ಬಿಟ್ಟು ಕೆಲಸ ಕಾರ್ಯಗಳನ್ನು ನಡೆಸಿದ್ದೇವೆ, ಇದಕ್ಕಾತಮಗೆ ಜ್ಞಾಪಕ ಇರಬಹುದು. ಮಾನ್ಯ ಸಂಸದೀಯ ವ್ಯವಹಾರ ಸಚಿವರು ರೆಸಲ್ಯೂಷನ್‌ನ್ನು ಮುಂದಕ್ಕೆ ಓದಲಿ.